ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಪ್ರಿ ಎಂಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ಕರ್ನಾಟಕ

ದಿನಾಂಕ : DATE : 18/6/2020

ಮಹಾಮಾರಿಗೆ ಸಿದ್ಧಗೊಂಡ ಸಮರ್ಥ ಮದ್ದು?

ಡೆಕ್ಸಾಮೆಥಸೊನ್ ಬಳಕೆಗೆ ಎನ್‌ಎಚ್‌ಎಸ್‌ಗೆ ಬ್ರಿಟನ್ ಅನುಮತಿ

ಲಂಡನ್: ಮನುಕುಲವನ್ನು ಕಾಡುತ್ತಿರುವ ಕೊರೊನಾ ಸೋಂಕಿಗೆ ಪರಿಣಾಮಕಾರಿ ಲಸಿಕೆ ಕಂಡುಹಿಡಿಯಲು ವಿಶ್ವದ ಅನೇಕ ರಾಷ್ಟ್ರಗಳು ಪೈಪೋಟಿಗೆ ಬಿದ್ದಂತೆ ಸಂಶೋಧನೆಗಳನ್ನು ಕೈಗೊಳ್ಳುತ್ತಿವೆ. ಲಸಿಕೆ ಅಭಿವೃದ್ಧಿಗೆ ಪ್ರತಿಷ್ಠಿತ ಸಂಘ-ಸಂಸ್ಥೆಗಳು ಕೋಟಿಗಟ್ಟಲೆ ಹಣವನ್ನು ದೇಣಿಗೆಯಾಗಿ ನೀಡಿವೆ. ಇಂತಹ ಪ್ರಯತ್ನಗಳ ಮಧ್ಯೆ ಬ್ರಿಟನ್‌ನ ಸರಕಾರಿ ಸ್ವಾಮ್ಯದ ರಾಷ್ಟ್ರೀಯ ಆರೋಗ್ಯ ಸೇವೆ (ಎನ್‌ಎಚ್‌ಎಸ್) ಕೊರೊನಾ ರೋಗಿಗಳ ಮೇಲೆ ಡೆಕ್ಸಾಮೆಥಸೊನ್ ಔಷಧ ಪ್ರಯೋಗಿಸಲು ಅನುಮತಿ ನೀಡಿದೆ. ತೀವ್ರತರದ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವ ಕೊರೊನಾ ರೋಗಿಗಳನ್ನು ಬದುಕುಳಿಸುವಲ್ಲಿ ಇದು ಪರಿಣಾಮಕಾರಿಯಾಗಿ ಕೆಲಸ ಮಾಡಿದೆ ಎಂಬ ಅಂಶ ಪ್ರಾಯೋಗಿಕ ಬಳಕೆಯಲ್ಲಿ ಸಾಬೀತಾದ ಹಿನ್ನೆಲೆಯಲ್ಲಿ ಬ್ರಿಟನ್ ಸರಕಾರ ದೇಶದಲ್ಲಿ ಇದರ ಸಾರ್ವತ್ರಿಕ ಬಳಕೆಗೆ ಒಪ್ಪಿಗೆ ಕೊಟ್ಟಿದೆ.

ಕ್ಲಿನಿಕಲ್ ಟ್ರಯಲ್ಸ್‌ನಲ್ಲಿ ಇದು ಕೊರೊನಾ ರೋಗಿಗಳ ಸಾವನ್ನು ಒಂದನೇ ಮೂರರಷ್ಟು ತಗ್ಗಿಸುವಲ್ಲಿ ಯಶಸ್ವಿಯಾಗಿದೆ ಎಂದು ಆಕ್ಸ್‌ಫರ್ಡ್ ವಿವಿಗಳ ವಿಜ್ಞಾನಿಗಳ ತಂಡ ದೃಢೀಕರಿಸಿದ ಬಳಿಕ ಸರಕಾರವು ಕೋವಿಡ್-19ರೋಗಿಗಳ ಮೇಲೆ ಇದರ ಬಳಕೆಗೆ



ಅನುಮತಿ ನೀಡಿದೆ. ಆಕ್ಸಿಜನ್ ವ್ಯವಸ್ಥೆ, ವೆಂಟಿಲೇಟರ್‌ಗಳ ಮೇಲಿರುವ ರೋಗಿಗಳ ಪಾಲಿಗೆ ಇದೊಂದು ವರದಾನವಾಗಲಿದೆ ಎನ್ನಲಾಗಿದೆ.

ಡೆಕ್ಸಾಮೆಥಸೊನ್ ಎಲ್ಲೆಡೆ ಸುಲಭದಲ್ಲಿ ಹಾಗೂ ಅಗ್ಗದ ದರದಲ್ಲಿ ದೊರೆಯುವ ಔಷಧವಾಗಿದೆ. ಕ್ಲಿನಿಕಲ್ ಟ್ರಯಲ್ಸ್‌ನಲ್ಲಿ ವೆಂಟಿಲೇಟರ್‌ಗಳ ಮೇಲಿರುವ ಕೊರೊನಾ ರೋಗಿಗಳ ಸಾವನ್ನು ಶೇ. 35ರಷ್ಟು ತಗ್ಗಿಸುವಲ್ಲಿ ಯಶಸ್ವಿಯಾಗಿದೆ ಎಂದು ರಿಕವರಿ (ರ್‍ಯಾಂಡಮೈಸ್ಡ್ ಇವ್ಯಾಲ್ಯುಯೇಷನ್ ಆಫ್ ಕೋವಿಡ್-19 ಥೆರಪಿ) ತಂಡದ ಸಂಶೋಧಕರ ವರದಿ ತಿಳಿಸಿದೆ. ಪ್ರಧಾನಿ ಬೋರಿಸ್ ಜಾನ್ಸನ್ ಅವರು ವಿಜ್ಞಾನಿಗಳ ಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದು ಇದೊಂದು ಮಹತ್ವದ ಸಾಧನೆಯಾಗಿದೆ ಎಂದು ಬಣ್ಣಿಸಿದ್ದಾರೆ. ಮುಂದಿನ ದಿನಗಳಲ್ಲಿ ಔಷಧ ತಯಾರಿಕೆ ಸೂತ್ರ ಬಳಸಿಕೊಂಡು ಲಸಿಕೆ ತಯಾರಿಸುವ ಬಗ್ಗೆಯೂ ವಿಜ್ಞಾನಿಗಳ ತಂಡ ಗಮನ ಹರಿಸಲಿದೆ ಎಂದು ಸರಕಾರದ ಮೂಲಗಳು ಹೇಳಿವೆ.

ಕ್ಲಿನಿಕಲ್ ಟ್ರಯಲ್ ಹೇಗಿತ್ತು?: ಕ್ಲಿನಿಕಲ್ ಟ್ರಯಲ್ಸ್‌ನಲ್ಲಿ 2,104 ಕೊರೊನಾ ರೋಗಿಗಳಿಗೆ ನಿತ್ಯ 6 ಮಿ.ಗ್ರಾಂ ಡೆಕ್ಸಾಮೆಥಸೊನ್ ಔಷಧಿಯನ್ನು ಮಾತ್ರೆ ಅಥವಾ ಐವಿ (ನೇರವಾಗಿ ರಕ್ತನಾಳಕ್ಕೆ) ರೂಪದಲ್ಲಿ 10 ದಿನಗಳ ಕಾಲ ನೀಡಿದ್ದರು. ಕೋವಿಡ್‌ಗೆ ಸಾಮಾನ್ಯ ಚಿಕಿತ್ಸೆ ಪಡೆಯುತ್ತಿದ್ದ 4,321 ರೋಗಿಗಳ ಆರೋಗ್ಯ ಸ್ಥಿತಿಯನ್ನು ಹಾಗೂ ಡೆಕ್ಸಾಮೆಥಸೊನ್ ಮಾತ್ರೆ ಸೇವಿಸಿದ ರೋಗಿಗಳ ಆರೋಗ್ಯ ಸ್ಥಿತಿಯನ್ನು ಹೋಲಿಕೆ ಮಾಡಿ ಅಧ್ಯಯನ ನಡೆಸಲಾಗಿದೆ. ಡೆಕ್ಸಾಮೆಥಸೊನ್ ಬಳಕೆಯಿಂದ ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳ ಮರಣ ಪ್ರಮಾಣ ಶೇ. 35 ಇಳಿಕೆಯಾಗಿದೆ. ಆಮ್ಲಜನಕದ ಅಗತ್ಯವಿದ್ದ ರೋಗಿಗಳ ಪೈಕಿ ಸಾವಿನ ಪ್ರಮಾಣ ಶೇ. 25ರಷ್ಟು ಇಳಿಕೆಯಾಗಿದೆ. ಈಗಾಗಲೇ ಔಷಧ ಬಳಕೆಯ ಕ್ಲಿನಿಕಲ್ ಟ್ರಯಲ್ಸ್‌ಗೆ 1,77,00 ರೋಗಿಗಳು ನೋಂದಣಿ ಮಾಡಿಕೊಂಡಿದ್ದಾರೆಂದು ಸರಕಾರ ಹೇಳಿದೆ.

ಲಸಿಕೆ ಅಭಿವೃದ್ಧಿಯ ಹಂತಗಳು

	ಅನುಮತಿ ಪಡೆಯಲು ಪೈಪೋಟಿ
ಪ್ರಿ ಕ್ಲಿನಿಕಲ್ ಹಂತ ಇಲಿ ಮತ್ತು ಮಂಗಗಳಿಗೆ ವೈರಾಣು ತಗುಲಿಸಿ ಬಳಿಕ ಅವುಗಳ ಮೇಲೆ ಲಸಿಕೆ ಪ್ರಯೋಗಿಸಿ ವೈರಾಣು ವಿರುದ್ಧ ಹೋರಾಡುವಂತಹ ರೋಗ ನಿರೋಧಕ ಶಕ್ತಿ ವೃದ್ಧಿಸಿಕೊಳ್ಳಲಿಯವೇ ಎಂಬ ಬಗ್ಗೆ ಅಧ್ಯಯನ.	125+
ಮೊದಲ ಹಂತ ಹಲವು ಷರತ್ತುಗಳಿಗೆ ಬದ್ಧರಾದ ಕೆಲವೇ ಕೆಲವು ಜನರ ಮೇಲೆ ಅತ್ಯಂತ ಸುರಕ್ಷತೆಯಿಂದ ಅಲ್ಪ ಪ್ರಮಾಣ(ಡೊಸೇಜ್)ದಲ್ಲಿ ಪ್ರಯೋಗ. ಅವರಲ್ಲಿನ ರೋಗ ನಿರೋಧಕ ಶಕ್ತಿ ವೃದ್ಧಿ ಬಗ್ಗೆ ಪರಿಶೀಲನೆ.	8
ಎರಡನೇ ಹಂತ ಈ ಹಂತದಲ್ಲಿ ನೂರಾರು ಜನರನ್ನು ವಯಸ್ಸಿಗೆ ಅನುಗುಣವಾಗಿ ವಿಭಾಗಿಸಿ ಲಸಿಕೆ ಪ್ರಯೋಗಿಸಿ ಅವರ ಜೀವಕೋಶಗಳಲ್ಲಿ ಆಗುವ ಬದಲಾವಣೆಗಳನ್ನು ವಿಶ್ಲೇಷಿಸಲಾಗುತ್ತದೆ.	8
ಮೂರನೇ ಹಂತ ಸಾವಿರಾರು ಜನರ ಮೇಲೆ ಪ್ರಯೋಗಿಸಿ ಅವರ ಆರೋಗ್ಯದ ಮೇಲೆ ಲಸಿಕೆ ಉಂಟು ಮಾಡುವ ಸಾಧಕ-ಬಾಧಕಗಳನ್ನು ಅಧ್ಯಯನ ನಡೆಸಲಾಗುತ್ತದೆ.	2
ನಾಲ್ಕನೇ ಹಂತ ಲಸಿಕೆಯನ್ನು ಸಾರ್ವತ್ರಿಕ ಬಳಕೆಗೆ ಅನುಮತಿ ನೀಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಪ್ರತಿಯೊಂದು ದೇಶದಲ್ಲಿ ಆರೋಗ್ಯ ಸಂಬಂಧಿ ಸಂಸ್ಥೆಗಳು ನಿರ್ಧರಿಸುವ ಹಂತವಿದು.	0